ಋಣ ಇಟ್ಟುಕೊಳ್ಳುವವರೂ ಅಲ್ಲ. ಮಹದೇವ ರಾಯರು ಊಟ ಹಾಕಿದ್ದಕ್ಕೆ ಅದರ ಬಾಬ್ತು ಎಂದು ಹಣ ಕೊಡುತ್ತಾರೆ. ಇನ್ಯಾಕೆ ಚಿಂತೆ, ಚಿಂತೆ ಮಾಡಬೇಡ' ಎಂದು ಹೇಳಿ ಕಳುಹಿಸಿದ್ದರು. ವೈಕುಂಠಕ್ಕೆ ಬಂದಿದ್ದ ಅತ್ತೆ ಮಾವ ಗಂಡನ ಜೊತೆಯಲ್ಲಿ ನಾನೂ ಹೊರಟು ಬಿಟ್ಟೆ. ನನ್ನ ಯಜಮಾನರು ಅಪ್ಪನನ್ನು ಜೊತೆಯಲ್ಲಿ ಬರುವಂತೆ ಕರೆದರು. ಆದರೆ ಅಪ್ಪ ಬರಲೊಪ್ಪಲಿಲ್ಲ. ನನ್ನ ಹೆರಿಗೆ ಗಂಡನ ಮನೆಯಲ್ಲೇ ಆಯಿತು. ಅಪ್ಪ ಮಗುವನ್ನು ನೋಡಲು ಬಂದವನು,

'ಅಮ್ಮ ಇದ್ದಿದ್ದರೆ' ಎಂದು ಗೊಣಗಿದ್ದ. ಅವನ ನೋವು ಎದೆಯೊಳಗಿಂದ ಹೊರಬರಲಿಲ್ಲ. ಮಗುವನ್ನು ನೋಡಿ ಹೋದವನು ಕಾಯಿಲೆಯಲ್ಲಿ ಮಲಗಿ ಬಿಟ್ಟ. ಮೂರು ತಿಂಗಳ ಮಗುವನ್ನು ಎತ್ತಿಕೊಂಡು ಒಂದೆರಡು ಸಾರಿ ಅಪ್ಪನನ್ನು ನೋಡಿ ಬರಲೆಂದು ಹೋಗಿದ್ದೆ. ಅದು ಬಿಟ್ಟರೆ ಅವನನ್ನು ನೋಡಿಕೊಂಡಿದ್ದೆಲ್ಲಾ ಕಮಲತ್ತೆ. ಅವರಿಗೂ ವಯಸ್ಸಾಗಿತ್ತು. ಆದರೂ ಅವರು ರೇಜಿಗೆ ಪಡದೆ ಸೇವೆ ಮಾಡಿದ್ದರು. ಅಪ್ಪನ ಯೋಗಕ್ಷೇಮದ ಬಗ್ಗೆ ಪ್ರತಿ ನಿತ್ಯ ಫೋನ್ ಮುಖಾಂತರ ತಿಳಿಸುತ್ತಿದ್ದರು. ನನಗೂ ಅತ್ತೆ ಮಾವ ಇರುವ ಮನೆಯಲ್ಲಿ ಜವಾಬ್ದಾರಿ ಬಿಟ್ಟು ಆಗಿಂದಾಗ್ಗೆ ಹೋಗಲು ಆಗುತ್ತಿರಲಿಲ್ಲ. ಅಪ್ಪನಿಗೂ ನಾನು ಬರಬೇಕು ಬಂದು ಸೇವೆ ಮಾಡಬೇಕು ಎನ್ನುವ ಬಯಕೆ ಏನೂ ಇರಲಿಲ್ಲವಂತೆ ಕಮಲತ್ತೆ ಮಾತನಾಡುವಾಗೆಲ್ಲಾ ಹೇಳುತ್ತಿದ್ದರು,

'ನಿನ್ನಮ್ಮ ಸತ್ತಮೇಲೆ ನಿನ್ನ ಅಪ್ಪನಿಗೆ ಪ್ರಪಂಚವೇ ಶೂನ್ಯ ಎನಿಸಿ ಬಿಟ್ಟಿದೆ ಪ್ರಿಯ. ಈಗೀಗ ಅವರಿಗೆ ತಿನ್ನುವುದಕ್ಕೂ ಏನೂ ಬೇಡ ಎನಿಸತೊಡಗಿದೆ. ಒಂದು ತುತ್ತು ಬಾಯಿಗೆ ಹಾಕುವುದರೊಳಗೆ ಸಾಕು ಎಂದು ಬಿಡುತ್ತಾರೆ. ನನ್ನ ಹತ್ತಿರ ಮಾಡಿಸಿಕೊಳ್ಳುವುದಕ್ಕೆ ಅವರಿಗೆ ಇಷ್ಟವಿಲ್ಲ ಎಂದು ಕಾಣುತ್ತದೆ. ಸಂಕೋಚದಿಂದ ಅವರ ಶರೀರ ಮುದುಡುತ್ತದೆ. ನಿನಗೆ ನಿನ್ನ ಸಂಸಾರ ಬಿಟ್ಟು ಬರೋಕಾದರೆ ನಾಲ್ಕು ದಿನ ಬಂದು ಹೋಗ್ತೀಯ' ಎಂದು ಅಂದು ಫೋನ್ ಮೂಲಕ ಮಾತನಾಡುವಾಗ ಕಮಲತ್ತೆ ಅಂದರು,

'ಕಮಲತ್ತೆ ಯಾಕೆ ಬೇಜಾರಾಗಿದ್ಯ' ಎಂದು ನಾನು ಕೇಳಿದಾಗ,

'ಹಾಗೇನು ಇಲ್ಲ ಪ್ರಿಯ, ಅಂತ್ಯಕಾಲದ ಆಸೆಗಳು ಏನೇನು ಇರುತ್ತೋ ಬಂದು ಹೋಗಿದ್ದರೆ ಚೆನ್ನಾಗಿತ್ತೇನೋ ಎಂದು ಹೇಳಿದೆ. ಆಗದಿದ್ದರೆ ಬೇಡ. ನಿನಗೂ ಚಿಕ್ಕಮಗು, ನನ್ನ ಜವಾಬ್ದಾರಿ ಎಲ್ಲಾ ಮುಗಿದಿದೆ. ಇಲ್ಲೇನಿದೆ ನನಗೆ ಕೆಲಸ. ಹಿರಿಯರನ್ನು ನೋಡಿಕೊಂಡರೆ ಪಾಪವೇನು ಬರುವುದಿಲ್ಲ' ಎಂದು ಫೋನನ್ನು ಕೆಳಗಿಟ್ಟು ಬಿಟ್ಟರು. ಯಾಕೋ ಕಮಲತ್ತೆಗೆ ಬೇಜಾರಾದಂತಿದೆ. ಒಬ್ಬರು ಅದರಲ್ಲೂ ಯಾವ ಸಂಬಂಧವೂ ಇಲ್ಲದವರು ದಿನ ಬೆಳಗ್ಗೆ ನೋಡಿಕೊಳ್ಳಬೇಕೆಂದರೆ ಹೇಗೆ ಸಾಧ್ಯ. ಕಮಲತ್ತೆ ಒಳ್ಳೆಯವು. ಆಗಲೇ ಅಮ್ಮ ಸತ್ತು ಮೂರು ತಿಂಗಳು ಕಳೆದು ಹೋಗಿದೆ. ಇನ್ನೆಷ್ಟು ಕಾಲ ಅವರು ಅಪ್ಪನ ಸೇವೆ ಮಾಡಲು ಸಾಧ್ಯ ಎಂದು ಯೋಚಿಸಿದ ನಾನು ಅತ್ತೆಯನ್ನು ಕೇಳಿದೆ.

'ಅತ್ತೆ ಒಂದು ಹತ್ತಿಪ್ಪತ್ತು ದಿವಸ ಅಪ್ಪನೊಡನೆ ನಾನಿದ್ದು ಬರಲಾ. ನಾನು ಹೋದರೆ ಅಪ್ಪನಿಗೆ ಸಂತೋಷವಾಗಬಹುದು. ಬಂದರೆ ನಮ್ಮ ಮನೆಗೆ ಕರೆದುಕೊಂಡು ಬರುತ್ತೇನೆ' ಎಂದೆ. ಅತ್ತೆ ನನ್ನನ್ನು ಅಪ್ಪನಿದ್ದಲ್ಲಿಗೆ ಕಳುಹಿಸಲು ಒಪ್ಪಿದರು. ಆದರೆ ಅಪ್ಪನನ್ನು ಕರೆದುಕೊಂಡು ಬರುವುದರ ಬಗ್ಗೆ ಏನೂ ಹೇಳಲಿಲ್ಲ. ಮಗುವನ್ನು ಅತ್ತೆ ನೋಡಿಕೊಳ್ಳುತ್ತೇನೆ ಎಂದದ್ದರಿಂದ ನಾನೊಬ್ಬಳೆ ಅಪ್ಪನಲ್ಲಿಗೆ ಬಂದೆ. ಅಪ್ಪ ಮಲಗಿದ್ದರು. ಕೂಗಿದರೆ ಉತ್ತರ ಕೊಡಲಿಲ್ಲ. ನಾಲ್ಕು ದಿನದಿಂದ ಹೀಗೆ ಮಾಡುತ್ತಿದ್ದಾರೆ ಎಂದರು ಕಮಲತ್ತೆ.

'ಕರೆದರೆ ಹೂ.. ಎನ್ನುವುದಿಲ್ಲ. ಊಟ ಮಾಡಿಸಲು ಹೋದರೆ ಉಗಿಯುತ್ತಾರೆ. ಸದಾ ಏನನ್ನೋ ಗೊಣಗುತ್ತಿರುತ್ತಾರೆ. ಒಮ್ಮೊಮ್ಮೆ ನನಗೆ ಕಾಲನ ಕರೆ ಇನ್ನೂ ಬಂದಿಲ್ಲ. ಯಾವಾಗ ಬರುತ್ತದೆ ಕಮಲ ನಿಮಗೇನಾದರೂ ಗೊತ್ತಾ' ಎಂದು ಕೇಳುತ್ತಿರುತ್ತಾರೆ. ಮಕ್ಕಳ ಹಾಗೆ ಏನೇನೋ ಮಾತುಗಳು, ಪ್ರಶ್ನೆಗಳು, ಉತ್ತರಿಸದಿದ್ದರೆ ಸಿಟ್ಟು, ಇತ್ತೀಚೆಗೆ ಕೂತಲ್ಲೆ ಸುಸು ಮಾಡುತ್ತಾರೆ. ನಾನು ಬಳಿಯುತ್ತಿದ್ದರೆ ಬಿದ್ದೂ ಬಿದ್ದು ನಗುತ್ತಾರೆ, ಏನು ಮಾಡೋದು ವಯಸ್ಸಾದೋರು ಎಂದು ನನಗೆ ನಾನೇ ಸಮಾಧಾನ ಹೇಳಿಕೊಳ್ಳುತ್ತೇನೆ. ನಾಲ್ಕು ದಿನ ಇದ್ದು ನೋಡು ಪ್ರಿಯ ನಿನಗೆ ಎಲ್ಲಾ ತಿಳಿಯುತ್ತದೆ' ಎಂದರು. ಕಮಲತ್ತೆಯನ್ನು ನೋಡಿ ನನಗೆ ಅಯ್ಯೋ! ಪಾಪ ಎನಿಸಿತು. ಕಮಲತ್ತೆ ಯಾರೋ ಏನೋ ಸಂಬಂಧ ಇಲ್ಲದವರು. ನೆರೆಮನೆಯವರಷ್ಟೆ. ಎಂಥ ಮಾನವೀಯ ಅನುಕಂಪ ಅವರದ್ದು ಎಂದುಕೊಳ್ಳುತ್ತಿರ ಬೇಕಾದರೆ ಕಮಲತ್ತೆ ಅಂದರು.

'ನಾನು ಹೀಗಂದೆ ಅಂತ ನೀನೇನು ಬೇಜಾರು ಮಾಡಬೇಡ ಪ್ರಿಯ. ನಿನ್ನಮ್ಮನಿಗೂ ನನಗೂ ಬಹುಕಾಲದ ದೋಸ್ತಿ. ಆ ದೋಸ್ತಿಗೆ ಕಿಂಚಿತ್ತೂ ಸಹಾಯ ಮಾಡಬೇಡವೆ ನಾನು' ಎಂದರು. ನಾನು ಸುಮ್ಮನಿದ್ದೆ. ಕಮಲತ್ತೆ ತುಂಬಾ ದಣಿದಿದ್ದಾರೆ ಎಂದು ಅನಿಸಿತು ಮನಸ್ಸಿಗೆ,

'ಕಮಲತ್ತೆ ನಿಮ್ಮ ಉಪಕಾರವನ್ನು ನಾನು ಹೇಗೆ ತೀರಿಸಲಿ' ಎಂದೆ. ನನ್ನ ಕಣ್ಣಲ್ಲಿ ತಟಕ್ಕನೆ ನೀರು ಚಿಮ್ಮಿತು. ಕಮಲತ್ತೆಯೂ ಅಳುತ್ತಿದ್ದರು.

'ಆಕೆ ಕಮಲತ್ತೆ ಕಣ್ಣೀರು' ಎಂದೆ. ಅಣ್ಣಯ್ಯ ನೆನಪಿಗೆ ಬಂದ, ಅವನೂ ಹೀಗೆ ಒಂಟಿಯಾಗಿ ಬದುಕಿದ. ಪಾಪ! ಹೆಣ್ಣು ಮಕ್ಕಳು ನಾವು ಮೂರು ಮಂದಿ ನಮ್ಮೆಲ್ಲರಿಗೂ ಮದುವೆ ಮಾಡಿಕೊಟ್ಟು ತಾನು ಮದುವೆಯಾಗದೆ ಉಳಿದು ಬಿಟ್ಟ ಪ್ರಿಯ. ಕೊನೆಗಾಲದಲ್ಲಿ ಅವನಿಗೆ ಯಾರೂ ಇರಲಿಲ್ಲ ನೋಡು. ನಾನು ಹೋಗೋಣ ಎಂದರೆ ನಿನ್ನ ಹಾಗೆ ನನ್ನ ಜವಾಬ್ದಾರಿ ಬಿಟ್ಟು ಹೋಗಲಾಗುತ್ತಿರಲಿಲ್ಲ. ಅಲ್ಲದೆ ಅವರು ಮಹಾ ದೂರ್ವಾಸರು ಹೊತ್ತು ಹೊತ್ತಿಗೆ ಊಟ ತಿಂಡಿ ಎಲ್ಲವೂ ಸರಿಯಾಗಿದ್ದರೇನೆ ಸಿಟ್ಟು. ಅದಿಲ್ಲದಿದ್ದರೆ ಅವರ ಮುಂದೆ ಯಾರೂ ನಿಲ್ಲುವ ಹಾಗಿರಲಿಲ್ಲ. ಹೀಗಿರುವಾಗ ನಾನು ಅಣ್ಣನಲ್ಲಿಗೆ ಹೋಗಿದ್ದು ಅವನ ಸೇವೆ ಮಾಡಲು ಸಾಧ್ಯವೇ. ತಂಗಿಯರಲ್ಲಿ ಒಬ್ಬಳು ಲಂಡನ್ನಿನಲ್ಲಿದ್ದಳು. ಇನ್ನೊಬ್ಬಳು ದೆಹಲಿಯಲ್ಲಿದ್ದಾಳೆ. ಅಣ್ಣ ಯಾರ ಸೇವೆಯನ್ನು ಬಯಸದೆ ಅಂತ್ಯ ಕಂಡ. ಅದರ ನೆನಪು ಯಾವಾಗಲೂ ನನ್ನ ಎದೆಯನ್ನು ಚುಚ್ಚುತ್ತಿರುತ್ತದೆ. ನಿನ್ನ ಅಪ್ಪ ನನ್ನ ಅಣ್ಣನಂತೆ ಕಂಡರು ಅವರ ಸೇವೆಯನ್ನಾದರೂ ಮಾಡಿ ಪುಣ್ಯ ಕಟ್ಟಿಕೊಳ್ಳೋಣ ಅಂತ ಹೊರಟೆ. ನಡಿ ಹೋಗೋಣ ನಿನ್ನ ಅಪ್ಪ ಯಾವತ್ತೂ ಹೀಗೆ ಮಲಗಿದವರಲ್ಲ' ಎಂದು ಅಪ್ಪ ಮಲಗಿದ್ದ ಮಂಚದ ಹತ್ತಿರ ಹೋದರು ಕಮಲತ್ತೆ. ಲಗೇಜನ್ನು ನಾನು ನಿಂತಲ್ಲೇ ಕೆಳಗಿಟ್ಟು ಕಮಲತ್ತೆಯನ್ನು ಹಿಂಬಾಲಿಸಿದೆ. ಕಮಲತ್ತೆ ಮಂಚದ ತುದಿಯಲ್ಲಿ ಕುಳಿತುಕೊಂಡು ಅಪ್ಪನನ್ನು ಕೂಗಿದರು.

'ಅಹಾಬಲ ರಾಯರೆ'

ಅಪ್ಪ ಕಮಲತ್ತೆಯ ಕೂಗಿಗೆ ಉತ್ತರಿಸಲಿಲ್ಲ.

'ಏಳಿರಾಯರೆ ಯಾರು ಬಂದಿದ್ದಾರೆ ನೋಡಿ' ಎಂದರು ಮತ್ತೆ ಕಮಲತ್ತೆ.

ಉಹು.. ಮಹಾಬಲರಾಯರು ಕಣ್ಣು ಬಿಡಲಿಲ್ಲ. ಅನುಮಾನ ಬಂದು ಕಮಲತ್ತೆ ಅಪ್ಪನನ್ನು ಮುಟ್ಟಿದರು, ಅವರ ತಲೆ ಹಿಂದಕ್ಕೆ ವಾಲಿತು. ನಾನು ನೋಡುತ್ತಲೇ ಇದ್ದೆ. ಕಮಲತ್ತೆ ಒಳಗೆ ಹೋಗಿ ಹತ್ತಿ ತಂದು ಮೂಗಿಗಿಟ್ಟು ನೋಡಿದರು. ರಾಯರು ಉಸಿರಾಡುತ್ತಿಲ್ಲ ಎಂದು ಗೊತ್ತಾಯಿತು.

'ಪ್ರಿಯ ನಿನ್ನಪ್ಪ ಇನ್ನಿಲ್ಲಮ್ಮ' ಎಂದರು. ನಾನು ಕುಸಿದಲ್ಲೇ ಕುಸಿದು ಕುಳಿತುಕೊಂಡೆ.

'ಕಾಲನ ಕರೆ' ಬರಲಿಲ್ಲ ಬರಲು ಇನ್ನೆಷ್ಟು ಕಾಲ ಕಾಯಬೇಕೋ ಎಂದು ಆಗಾಗ ಹೇಳುತ್ತಲೇ ಇದ್ದರು. 'ಕಾಲನ ಕರೆ ಬಂದಾಗ ಯಾರೂ ನಿಲ್ಲುವುದಿಲ್ಲ. ಎಲ್ಲರೂ ಹೋಗಲೇ ಬೇಕು' ಎಂದರು ಕಮಲತ್ತೆ ಬಿಕ್ಕುತ್ತ, ಸದ್ದು ಹೊರಬರದಂತೆ ನಾನೂ ಬಿಕ್ಕತೊಡಗಿದೆ.

■

## ಸೇನೆ

ಮಹತ್ಕಾರ್ಯ ಸಾಧನೆಗೆ
'ಕಪಿಸೇವೆ', 'ಅಳಿಲು ಸೇವೆ'
ಎರಡೂ ಬೇಕು!
ಕಪಿಸೇವೆಗೆ
'ಮಹಾಕಪಿ' ಗಳಿರುತ್ತಾರೆ!
ನಮ್ಮದೇನಿದ್ದರೂ
ಅಳಿಲು ಸೇವೆ!

★ ಸಿ.ಪಿ.ಕೆ.



ಈಶ್ವರ